# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

ಸಂ/ಕರಾಸಾ/ಮಂಡ್ಯವಿ/ಸಂ/ವಾ/691/2016-17 ದಿನಾಂಕ:-14/11/2016

## ಇ-ಟೆಂಡರ್ ಪ್ರಕಟಣೆ ಸಂ: 16/2016-17

ಕ.ರಾ.ರ.ಸಾ.ನಿಗಮ ಮಂಡ್ಯ ವಿಭಾಗಕ್ಕೆ ಸೇರಿದ ಈ ಕೆಳಗಿನ ವಾಹನ ನಿಲ್ದಾಣಗಳಲ್ಲಿ ಖಾಲಿಯಿರುವ, ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು ಪಡೆಯಲು ಪ್ರತಿ ವರ್ಷ ಶೇ.10 ರಷ್ಟು ಪರವಾನಗಿ ಶುಲ್ಕದ ಹೆಚ್ಚಳದೊಂದಿಗೆ **ತೆರೆದ ಸ್ಥಳದಲ್ಲಿ ವಾಣಿಜ್ಯ ಮಳಿಗೆ ನಡೆಸಲು 03 ವರ್ಷದ ಅವಧಿಗೆ ಹಾಗೂ ಶಾಶ್ವತ ಮಳಿಗೆಗೆ 05 ವರ್ಷ ಅವಧಿಗೆ** ಪರವಾನಗಿದಾರರನ್ನು ಇ-ಟೆಂಡರ್ ಮೂಲಕ ಆಯ್ಕೆ ಮಾಡಲು ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇಚ್ಛೆಯುಳ್ಳವರು ಸಂಬಂಧಿಸಿದ ಮಳಿಗೆಗಳ ಮುಂದೆ ಸೂಚಿಸಿರುವ ಇ.ಎಂ.ಡಿ. ಮೊತ್ತವನ್ನು ಇ ಪ್ರಕ್ಯೂರಮೆಂಟ್ ಮುಖೇನ **"ವಿಭಾಗೀಯ ನಿಯಂತ್ರಣಾಧಿಕಾರಿ ಕ.ರಾ.ರ.ಸಾ.ನಿಗಮ ಮಂಡ್ಯ ವಿಭಾಗ, ಮಂಡ್ಯ"** ರವರ ಹೆಸರಿನಲ್ಲಿ ಪಾವತಿಸುವುದು. **ದಿನಾಂಕ:-14/12/2016ರ ಸಮಯ:11.45**ರೊಳಗೆ ಇ-ಪ್ರೊಕ್ಯುರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಟೆಂಡರ್ ವಿವರ ಈ ಕೆಳಕಂಡಂತಿದೆ.

| ಕ್ರ ಸಂ. | ಬಸ್ ನಿಲ್ದಾಣ | ಮಳಿಗೆ ವಿವರ | ವಿಸ್ತೀರ್ಣ ಚ.ಅ | ಅವಧಿ | ಮಿತ ವ್ಯಯ ಶುಲ್ಕ | ಇ.ಎಂ.ಡಿ |
|---|---|---|---|---|---|---|
| 1 | ಮಂಡ್ಯ | ಜನರಲ್ ಸ್ಟಾಲ್-2 (ತೆರೆದ ಸ್ಥಳ) (ಅಂಗವಿಕಲರಿಗೆ ಮೀಸಲು) (2ನೇ ಬಾರಿಗೆ) | 10'*10'=100 | 3 ವರ್ಷ | 15,021.00 | 45,063.00 |
| 2 | ಮೇಲುಕೋಟೆ | ಜನರಲ್ ಸ್ಟಾಲ್-3 (2ನೇ ಬಾರಿಗೆ) | 198.04 | 5 ವರ್ಷ | 2,995.00 | 8,985.00 |
| 3 | ಮೇಲುಕೋಟೆ | ಜನರಲ್ ಸ್ಟಾಲ್-4 (2ನೇ ಬಾರಿಗೆ) | 198.04 | 5 ವರ್ಷ | 2,750.00 | 8,250.00 |
| 4 | ಹಲಗೂರು | ಉಪಹಾರ ಗೃಹ (2ನೇ ಬಾರಿಗೆ) | 752 | 5 ವರ್ಷ | 5,000.00 | 15,000.00 |
| 5 | ಪಾಂಡವಪುರ | ಸೈಕಲ್/ಸ್ಕೂಟರ್ ನಿಲ್ದಾಣ (1ನೇ ಬಾರಿಗೆ)(ದಿ:24.02.2014ರಿಂದ ಖಾಲಿಯಾಗಲಿದೆ) | 3228.00 | 3 ವರ್ಷ | 2,420.00 | 7,260.00 |
| 6 | ಮಂಡ್ಯ | ಜನರಲ್ ಸ್ಟಾಲ್-4 (ತೆರೆದ ಸ್ಥಳ) (ದಿ:01.03.2014ರಿಂದ ಖಾಲಿಯಾಗಲಿದೆ) | 10*10=100 | 3 ವರ್ಷ | 16,280.00 | 48,840.00 |
| 7 | ಮದ್ದೂರು | ಜನರಲ್ ಸ್ಟಾಲ್-5 (1ನೇ ಬಾರಿಗೆ)(ಅಂಗವಿಕಲರಿಗೆ) | 276.6 | 5 ವರ್ಷ | 11,220.00 | 33660.00 |
| **ಸುತ್ತೋಲೆ ಸಂ.821ರಂತೆ ಇ-ಟೆಂಡರ್ ಒಳಪಡುವ ಮಳಿಗೆಗಳ ವಿವರ** | | | | | | |
| 1 | ಮದ್ದೂರು | ಜನರಲ್ ಸ್ಟಾಲ್-6 (1ನೇ ಬಾರಿಗೆ) | 276.6 | 5 ವರ್ಷ | | 37,665.00 |

ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ "http://www.eproc.karnataka.gov.in" ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ:14/12/2016ರ ಬೆಳಿಗ್ಗೆ 11.45 ಗಂಟೆಯವರೆಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ದಿ:-16/12/2016ರ ಸಮಯ 11.45 ಗಂಟೆಗೆ ಟೆಂಡರ್ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ ಮಂಡ್ಯ ವಿಭಾಗ, ಮಂಡ್ಯ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ-**7760990652, 7760990661,**

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ

**ಗೌರವ ಪೂರ್ವಕವಾಗಿ ಪ್ರತಿಯನ್ನು:-**

ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.

**ಪ್ರತಿಯನ್ನು:-**

1) ಘಟಕ ವ್ಯವಸ್ಥಾಪಕರು **ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ.ಆರ್.ಪೇಟೆ ಹಾಗೂ ಪಾಂಡವಪುರ** ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಟೆಂಡರ್ ಬಿಡ್ ತೆರೆಯುವ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

2) ಸಹಾಯಕ ಸಂಚಾರ ವ್ಯವಸ್ಥಾಪಕರು/ ವಿಭಾಗೀಯ ಸಂಚಲನಾಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, **ಮಂಡ್ಯ** ವಿಭಾಗರವರುಗಳು ದಿನಾಂಕ:-16/12/2016ರಂದು ಇ-ಟೆಂಡರ್ ನಡೆಯುವ ಸಮಯದಲ್ಲಿ ಹಾಜರಿರಲು ಸೂಚಿಸಲಾಗಿದೆ ಹಾಗೂ ಸಕಾನಿಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಇ-ಟೆಂಡರ್ ಬಿಡ್ ತೆರೆಯುವ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ಮಳಿಗೆ ಪಾವತಿಸುವ ಇಎಂಡಿ ಮೊತ್ತವನ್ನು ಇ-ಪೇಮೆಂಟ್ ಮೂಲಕ ಮಾತ್ರ e-Portal ನಲ್ಲಿ ಪಾವತಿಸುವುದು.
2. ಬಿಡ್‌ದಾರರು ಅರ್ಜಿಯನ್ನು ಆನ್‌ಲೈನ್ ಮುಖಾಂತರವೇ ಸಲ್ಲಿಸುವುದು, ನೇರವಾಗಿ ಅಥವಾ ಕಛೇರಿಗೆ ಸಲ್ಲಿಸಲು ಅವಕಾಶವಿಲ್ಲ.
3. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10 ರಷ್ಟು ಹೆಚ್ಚಾಗುವುದು.
4. ಬಿಡ್‌ದಾರರು ಇ-ಟೆಂಡರ್‌ನಲ್ಲಿ ಬಿಡ್ ಮಾಡುವ ಸಮಯದಲ್ಲಿ ಪಾನ್ ಕಾರ್ಡ್ ಮತ್ತು ವಿಳಾಸ ದೃಢೀಕರಣ ಪ್ರತಿ, ಆಧಾರ್, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ಚಾಲನ ಪರವಾನಗಿ ಚೀಟಿ ಗಳಲ್ಲಿ ಯಾವುದಾದರೊಂದನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಬೇಕು. ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.
5. ಸಾಮಾನ್ಯ ಸ್ಥಾಯೀ ಆದೇಶ ಸಂಖ್ಯೆ: 602/ದಿ.04/06/08 ಮತ್ತು 1023/ದಿ:30-03-2010ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರಿಸುವ ವಾಣಿಜ್ಯ ಮಳಿಗೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ತಾಲ್ಲೂಕು ತಹಶಿಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ದೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.
6. ಸಾಮಾನ್ಯ ಸ್ಥಾಯೀ ಆದೇಶ ಸಂಖ್ಯೆ: 584/ದಿ:09-11-2006 ಪ್ರಕಾರ ವಿಕಲಚೇತನ ಅರ್ಜಿದಾರರು ಕನಿಷ್ಠ ಶೇ.40/- ರಷ್ಟು ಅಂಗವಿಕಲತೆಯನ್ನು ಹೊಂದಿರಬೇಕು. ಸಂಪೂರ್ಣ ಅಂಧ, ಕಿವುಡು ಹಾಗೂ ಮೂಕ ಅಭ್ಯರ್ಥಿಗಳು ಸಹ ಅರ್ಜಿಸಲ್ಲಿಸಬಹುದಾಗಿದೆ. ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಭಾವಚಿತ್ರ ಇರುವ ಅಂಗವಿಕಲತೆಯ ಚಾಲ್ತಿಯಿರುವ ಪುಸ್ತಕ/ಪ್ರಮಾಣ ಪತ್ರವನ್ನು ಮತ್ತು ಅಂಗವಿಕಲತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.
7. ನಿಗಮದ/ಕರ್ನಾಟಕ ಸರ್ಕಾರ/ಭಾರತ ಸರ್ಕಾರ/ಅರೆ ಸರ್ಕಾರಿ/ಯಾವುದೇ ನಿಗಮದ ಕಪ್ಪು ಪಟ್ಟಿಯಲ್ಲಿ ಇರುವ ವ್ಯಕ್ತಿಯು ಸಂಧಾನದಲ್ಲಿ ಭಾಗವಹಿಸಲು ಅರ್ಹರಲeÉ.
8. ಮೊದಲನೇ ಬಿಡ್‌ದಾರರು ಬಿಡ್ ಹಿಂಪಡೆದಲ್ಲಿ/ಹೊರ ಬಂದಲ್ಲಿ, ಅಗತ್ಯ ದಾಖಲಾತಿಗಳನ್ನು ಇ-ಪೋರ್ಟ್‌ನಲ್ಲಿ ಸಲ್ಲಿಸದಿದ್ದಲ್ಲಿ ಹಾಗೂ ನಿಗಧಿತ ಅವಧಿಯಲ್ಲಿ ಭದ್ರತಾ ಠೇವಣಿ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಎರಡನೇ ಬಿಡ್‌ದಾರರ ಆಯ್ಕೆ ಮಾಡಿಕೊಳ್ಳುವ ಅಥವಾ ತಿರಸ್ಕರಿಸುವ ತೀರ್ಮಾನವನ್ನು ಕೇಂದ್ರ ಕಛೇರಿಯ ಅನುಮೋದನೆಯಂತೆ ಕ್ರಮ ಕೈಗೊಳ್ಳಲಾಗುವುದು.
9. ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಬಾಟಲ್ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಬೆಲೆಗೆ ಮಾರಾಟ ಮಾಡುವುದು.
10. ಟೆಂಡರ್ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷೆನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ ಹಾಗೂ ಕೂಡಲೇ ವ್ಯವಹಾರ ಪ್ರಾರಂಭಿಸಬೇಕಾಗಿರುತ್ತದೆ.
11. ಆಯ್ಕೆ ಆದ ಪರವಾನಗಿದಾರರು ಟೆಂಡರ್‌ನಲ್ಲಿ ನಮೂದಿಸಿರುವ ಮಾಸಿಕ ಪರವಾನಗಿ ಶುಲ್ಕದ 6+3 ಒಟ್ಟು 9 ಪಟ್ಟು ಭದ್ರತಾ ಠೇವಣಿಯನ್ನು ಪಾವತಿಸಬೇಕಿದ್ದು, ಅದರಲ್ಲಿ ಟೆಂಡರ್‌ನಲ್ಲಿ ನಮೂದಿಸಿರುವ ಮಾಸಿಕ ಪರವಾನಗಿ ಶುಲ್ಕದ 3ಪಟ್ಟು ಮೊತ್ತವನ್ನು ಟೆಂಡರ್ ದಿನವೇ ಪಾವತಿಸುವುದು, ಉಳಿಕೆ 3ಪಟ್ಟು ಮೊತ್ತವನ್ನು ಸಲ್ಲಿಸಿರುವ ಇಎಂಡಿ ಹಣವನ್ನು ಹೊಂದಾಣಿಕೆ ಮಾಡಿಕೊಂಡು 3ದಿನದೊಳಗಾಗಿ ಪಾವತಿಸಿ, ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್‌ನಡಿಯಲ್ಲಿ ಕರಾರು ಮಾಡಿಕೊಳ್ಳುವುದು. ಉಳಿಕೆ 3ಪಟ್ಟು ಮೊತ್ತವನ್ನು 3ನೇ ವರ್ಷದ ಪರವಾನಗಿ ಅವಧಿ ಮುಗಿಯುವುದೊರಳಗಾಗಿ ಪಾವತಿಸುವುದು. ಭದ್ರತಾ ಠೇವಣಿಯನ್ನು ಡಿ.ಡಿ.ರೂಪದಲ್ಲಿ "ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಮಂಡ್ಯ ವಿಭಾಗ" ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಅಥವಾ ನಗದಾಗಿ ಪಾವತಿಸುವುದು. ನಿಗದಿತ ಸಮಯಕ್ಕೆ ಭದ್ರತಾ ಠೇವಣಿ ಪಾವತಿಸದಿದ್ದ ಪಕ್ಷದಲ್ಲಿ ನಿಗಮಕ್ಕೆ ಪಾವತಿಸಿರುವ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (ರೂ25,000/- ಕ್ಕಿಂತ ಹೆಚ್ಚಿನ ಬಿಡ್ಡಾದಲ್ಲಿ ಅಥವಾ ನಿಗಧಿತ ಪರವಾನಗಿ ಶುಲ್ಕಕ್ಕಿಂತ ಕಡಿಮೆ ಸೂಚಿಸಿದ್ದಲ್ಲಿ ಕೇಂದ್ರ ಕಛೇರಿಯ ಅನುಮೋದನೆಯೊಡನೆ ಎರಡನೆ ಕಂತಿನ ಭದ್ರತಾ ಠೇವಣಿ ಹಣವನ್ನು ಪಾವತಿಸಿ ಕರಾರು ಮಾಡಿಕೊಳ್ಳುವುದು ಹಾಗೂ ಕೇಂದ್ರ ಕಛೇರಿಯ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು.).
12. ಆಯ್ಕೆಗೊಂಡ ಪರವಾನಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಶೇ.15% (ಪ್ರಸ್ತುತ ದರ) ರಷ್ಟು ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
13. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.
14. ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿಯಿರಿಸಿಕೊಂಡಿರುವವರು ಮತ್ತು ಕರಾರು ನಿಯಮ ಉಲ್ಲಂಘಿಸಿ ನಿಗಮದಿಂದ ಕರಾರು ಒಪ್ಪಂದ ರದ್ದಾಗಿರುವವರು ಇ-ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ ಹಾಗೂ ಅರ್ಜಿ ಸಲ್ಲಿಸಿದಲ್ಲಿ ಇಎಂಡಿ. ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುದು.
15. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
16. ಇ-ಟೆಂಡರ್ ಪ್ರಕ್ರಿಯೆಯಲ್ಲಿ ಮಳಿಗೆಗೆ ಆಯ್ಕೆಯಾದ ಅರ್ಜಿದಾರರು ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಇನ್ಕಮ್ ಟ್ಯಾಕ್ಸ್/ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕಡ್ಡಾಯವಾಗಿ ನೀಡುವುದು.
17. ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.
18. ಆಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತ: ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.
19. ಆಯ್ಕೆಗೊಂಡ ಪರವಾನಗಿದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ ಹಣವನ್ನು ಹಿಂತಿರುಗಿಸಲಾಗುವುದು.
20. ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆ ತಿಂಗಳ 07ನೇ ತಾರೀಖಿನೊಳಗೆ ಮತ್ತು ಸೇವಾ ತೆರಿಗೆಯನ್ನು ಆ ತಿಂಗಳ 05ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.

21. ಉಪಹಾರ ಗೃಹಗಳಲ್ಲಿ ಅಡಿಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು. ಉಪಹಾರಗೃಹದಲ್ಲಿ ಕಡ್ಡಾಯವಾಗಿ ಅಗ್ನಿ ರಕ್ಷಕ ಉಪಕರಣ ಅಳವಡಿಸುವುದು.
22. ಮಳಿಗೆಗಳಲ್ಲಿ ಟೂರಿಸ್ಟ್/ಟ್ರಾವೆಲ್ ಏಜೆನ್ಸಿ, ಮದ್ಯಪಾನ, ಮಾಂಸ, ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ ಮಾರಾಟ ವಸ್ತುಗಳನ್ನು, ಪಟಾಕಿ ಹಾಗೂ ಸ್ಪೋಟಕ ವಸ್ತುಗಳನ್ನು, ವಾಯುವ್ಯ ಮಾಲಿನ್ಯ ಮಾಡುವ ವ್ಯಾಪಾರ ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆ ಬರುವ ವ್ಯಾಪಾರಗಳಿಗೆ ನಿಷೇಧಿಸಲಾಗಿದೆ.
23. **ಶಾಶ್ವತ ಮಳಿಗೆಗಳು ಹಾಗೂ ತೆರೆದ ಸ್ಥಳಗಳು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗುವುದು** ಮತ್ತು ಟೆಂಡರ್‌ನಲ್ಲಿ ನೀಡಿರುವ/ ನಮೂದಿಸಿರುವ ನಿಗದಿತ ಸ್ಥಳದಲ್ಲಿ ಮಾತ್ರ ವ್ಯವಹಾರ ನಡೆಸತಕ್ಕದು.
24. ಆಯ್ಕೆಗೊಂಡ ಪರವಾನಗಿದಾರರು ಕರ್ನಾಟಕ ಸರ್ಕಾರವು ಜಾರಿ ಮಾಡಿರುವ 1957ರ ಗ್ರಾಹಕರ ಅಧಿನಿಯಮ-6/23(1) ನಿಯಮ (2) ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ಮಾರಾಟ ಮಾಡುವ ವಸ್ತುಗಳ ಮೇಲೆ ತಯಾರಕರು, ನಿರ್ದಿಷ್ಟ ಪಡಿಸಿದ ಗರಿಷ್ಟ ಬೆಲೆಗೆ ಮಾರಾಟ ಮಾಡಬೇಕಾಗಿರುತ್ತದೆ. ಗರಿಷ್ಠ ಬೆಲೆಯನ್ನು ಅಳಿಸುವುದು/ತಿದ್ದುವುದಾಗಲಿ ಇತ್ಯಾದಿಗಳು ದೂರು ಬಂದಲ್ಲಿ ನೀಡಲಾದ ಪರವಾನಗಿಯನ್ನು ರದ್ದುಪಡಿಸಲಾಗುವುದು.
25. ಆಯ್ಕೆಯಾದ ಪರವಾನಗಿದಾರರು ಮಳಿಗೆಯಲ್ಲಿ ಆಹಾರ ಪದಾರ್ಥಗಳ ದರಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸುವುದು.
26. ಆಯ್ಕೆಗೊಂಡ ಪರವಾನಗಿದಾರರು ನಿಗದಿತ ಸಮಯದೊಳಗೆ ಕರಾರು ಒಪ್ಪಂದ ಮಾಡಿಕೊಂಡು ವ್ಯಾಪಾರ ನಡೆಸದಿದ್ದಲ್ಲಿ ಅವರು ನೀಡಿರುವ ಇಎಂಡಿ ಮೊತ್ತವನ್ನು ಸಂಸ್ಥೆಗೆ ಆಗುವ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
27. ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ದರಾಗಿರಬೇಕು.
28. ತೆರೆದ ಸ್ಥಳಕ್ಕೆ ಮೂರು(03) ವರ್ಷ ಮತ್ತು ಸ್ಥಿರ ಮಳಿಗೆಗಳಿಗೆ ಐದು(05) ವರ್ಷ ಅವಧಿಗೆ ಆಯ್ಕೆಯಾದ ಅರ್ಜಿದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗುವುದು.
29. ಸ್ಕೂಟರ್ ಮತ್ತು ಸೈಕಲ್ ನಿಲ್ದಾಣದ ಅವಧಿ ಮೂರು(03) ವರ್ಷದಾಗಿರುತ್ತದೆ. ಆಯ್ಕೆಯಾದ ಪರವಾನಗಿದಾರರು ನಿಗಮವು ನಿಗದಿ ಪಡಿಸಿದ ದರದಂತೆ ಶುಲ್ಕವನ್ನು ಪಡೆಯುವುದು ಹಾಗೂ ದ್ವಿಚಕ್ರ ಪಾರ್ಕಿಂಗ್‌ಗಳಿಗೆ ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 206 'ಸಿ' ನ ಪ್ರಕಾರ ಟಿಡಿಎಸ್ ಮತ್ತು ಪ್ರಸ್ತುತ ಸೇವಾ ತೆರಿಗೆ ಶೇ.15% ಹಾಗೂ ಎಲ್ಲಾ ವಿಧವಾದ ವಾಣಿಜ್ಯ ಮಳಿಗೆಗಳಿಗೆ ಪ್ರಸ್ತುತ ಸೇವಾ ತೆರಿಗೆ ಶೇ.15% ರಷ್ಟು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಪಾವತಿಸಲು ಬದ್ಧರಾಗಿರಬೇಕು. ಸರ್ಕಾರ/ಸಂಬಂಧಪಟ್ಟ ಇಲಾಖೆಗಳು ವಿಧಿಸುವ ಯಾವುದೇ ರೀತಿ ತೆರಿಗೆಗಳಲ್ಲಿ ಕಾಲ ಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತಾದ್ದರಿಂದ ಸರ್ಕಾರ/ಸಂಬಂಧಪಟ್ಟ ಇಲಾಖೆಗಳು ವಿಧಿಸುವ ತೆರಿಗೆಯ ಪೂರ್ಣ ಶುಲ್ಕವನ್ನು ಪರವಾನಗಿದಾರರೇ ಬರಿಸತ್ತಕ್ಕದ್ದು.
30. ಟೆಂಡರ್‌ನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
31. ನಿಗಮದ/ಕರ್ನಾಟಕ ಸರ್ಕಾರ/ಭಾರತ ಸರ್ಕಾರ/ಅರೆ ಸರ್ಕಾರಿ/ಯಾವುದೇ ನಿಗಮದ ಕಪ್ಪು ಪಟ್ಟಿಯಲ್ಲಿ ಇರುವ ವ್ಯಕ್ತಿಯು ಇ-ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ.
32. ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳಿಗೆ ಮೂಲವೇತನ ಕಾಯ್ದೆಯಡಿ, ಕನಿಷ್ಠ ಮೂಲವೇತನ ನೀಡುವುದು ಹಾಗೂ ಇಎಸ್‌ಐ ಮತ್ತು ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಆನ್‌ಲೈನ್ ಮುಖಾಂತರ ಪಾವತಿಸುವುದು ಹಾಗೂ ದಾಖಲೆಗಳನ್ನು ಕೆಎಸ್‌ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.
33. ಆಯ್ಕೆಯಾದ ಪರವಾನಗಿದಾರರು ವ್ಯವಹಾರಕ್ಕೆ ಸಂಬಂಧಪಟ್ಟಂತೆ ತಾವೇ ಸ್ಥಳೀಯ/ಪುರಸಭೆಯ/ನಗರಸಭೆಯಿಂದ ಅನುಮತಿಯನ್ನು ಪಡೆದುಕೊಳ್ಳುವುದು.
34. ಟೆಂಡರ್‌ದಾರರು ಅರ್ಜಿ ಸಲ್ಲಿಸುವ ಮುನ್ನ/ಸಲ್ಲಿಸದ ನಂತರ ಸದರಿ ಮಳಿಗೆಗಳ ಸ್ಥಳ ಹಾಗು ನಕ್ಷೆಯ ಮಾಹಿತಿ ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಮಂಡ್ಯ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಮತ್ತು ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾಮೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://www.eproc.Karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು **ಹಾಗೂ Help Disk No- 080-25501227 & 080-25501216** ಸಂಪರ್ಕಿಸಿ ಪಡೆಯಬಹುದಾಗಿದೆ. **ದಿನಾಂಕ:-14-12-2016** ರ ಬೆಳಗ್ಗೆ **11:45** ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. **ದಿನಾಂಕ:-16-12-2016** ರ ಬೆಳಗ್ಗೆ **11:45** ಗಂಟೆಗೆ ಬಿಡ್ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ, ಕ.ರಾ.ರ.ಸಾ. ನಿಗಮ ಮಂಡ್ಯ ಬಸ್‌ನಿಲ್ದಾಣ, ಮಂಡ್ಯ ರವರಲ್ಲಿ** ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ:**7760990661** ಮತ್ತು ವಿಭಾಗೀಯ ಸಂಚಲನಾಧಿಕಾರಿ ಮೊಬೈಲ್ ಸಂಖ್ಯೆ:**7760990652.**

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ

**ಗೌರವ ಪೂರ್ವಕವಾಗಿ ಪ್ರತಿಯನ್ನು:-**

ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.

**ಪ್ರತಿಯನ್ನು:-**

1) ಘಟಕ ವ್ಯವಸ್ಥಾಪಕರು **ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ** ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ

ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಟೆಂಡರ್ ಬಿಡ್ ತೆರೆಯುವ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

2) ಸಹಾಯಕ ಸಂಚಾರ ವ್ಯವಸ್ಥಾಪಕರು/ ವಿಭಾಗೀಯ ಸಂಚಲನಾಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, **ಮಂಡ್ಯ** ವಿಭಾಗರವರುಗಳು ದಿನಾಂಕ:–16/12/2016ರಂದು ಇ–ಟೆಂಡರ್ ನಡೆಯುವ ಸಮಯದಲ್ಲಿ ಹಾಜರಿರಲು ಸೂಚಿಸಲಾಗಿದೆ ಹಾಗೂ ಸಕಾನಿಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಇ–ಟೆಂಡರ್ ಬಿಡ್ ತೆರೆಯುವ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.